ದಿನಾಂಕಃ 23/06/2023 ರಂದು ಸಾಕ್ಷಿಯನ್ನು ಪುನಃ ಕರೆಸಿಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಕೆ ಸಿ ಪಿ ವಕೀಲರಿಂದಃ**

3. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಸ್ವಲ್ಪ ಗೊತ್ತು. ನನ್ನ ಜನ್ಮ ದಿಃ20/05/1994 ಇರುತ್ತದೆ. ನಾನು ಹುಟ್ಟುವ ಪೂರ್ವದಲ್ಲಿ ನನ್ನ ತಾಯಿ ವಾದಿರವರ ತಂದೆಯ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಾನು ಹುಟ್ಟಿದ ನಂತರದಿಂದ ಈವರೆವಿಗೂ ವಾದಿಯ ತಂದೆಯ ಕುಟುಂಬದ ಬಗ್ಗೆ ನನಗೆ ಸ್ವಂತ ಮಾಹಿತಿ ಇರುವುದಿಲ್ಲ. ನನ್ನ ತಾಯಿ ಸಹಿ ಮಾಡುತಿದ್ದಳು, ಆದರೆ ಸರಿಯಾಗಿ ಸಹಿ ಮಾಡಲು ಬರುತ್ತಿರಲಿಲ್ಲ. ಸದರಿ ಸಹಿಯನ್ನು ನನ್ನ ತಾಯಿ ಕನ್ನಡದಲ್ಲಿ ಮಾಡುತಿದ್ದರು. (ಸಾಕ್ಷಿಗೆ ವಕೀಲರು ದೃಢೀಕೃತ ಅದಾ ಸಂಃ86/2010 ರ ವಾದ ಪತ್ರವನ್ನು ತೋರಿಸಿ, ಸದರಿ ವಾದ ಪತ್ರದಲ್ಲಿರುವ ಸಹಿ ನಿಮ್ಮ ತಾಯಿಯವರ ಸಹಿ ಇದೆ ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ದೃಢೀಕೃತ ವಾದ ಪತ್ರವನ್ನು ನಿಕ್ಯೂಃ1 ಎಂದು ಗುರುತಿಸಲಾಯಿತು. )

(ಈ ಹಂತದಲ್ಲಿ ವಾದಿ ಕಾಲಾವಕಾಶ ಕೋರಿರುತ್ತಾರೆ. ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ23-06-2023 ರಂದು ಮ. 3ಃ58 ರಿಂದ 4ಃ03 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.